# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ**

# ನಾಗರೀಕ ಸನ್ನದು

## ಜೂನ್ 29, 2020ರವರೆಗಿನ ವಿವರ

ವಿಜ್ಞಾನ ಮತ್ತು ತಂತ್ರಜ್ಞಾನಗಳಿಗೆ ಉತ್ತೇಜನ ನೀಡಲು ಮತ್ತು ಜನಸಾಮಾನ್ಯರಲ್ಲಿ ಅದರಲ್ಲೂ ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಭಾಗದ ಜನರಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸಲು, ಕರ್ನಾಟಕ ಸರ್ಕಾರವು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಸ್ಥಾಪಿಸಿದೆ.

**ಸ್ಥಾಪನೆ:** ಜುಲೈ 30, 2005

**ಸರ್ಕಾರಿ ಆದೇಶ:** ವಿಯಇ ವಿತ್ರಮ 2005 ದಿನಾಂಕ 30.07.2005

**ನೊಂದಾಯಿತ ಸಂಸ್ಥೆ:** ಕರ್ನಾಟಕ ಸಂಘ ನಿಯಮಾವಳಿ 1960ರಡಿಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸ್ವಾಯತ್ತ ಸಂಸ್ಥೆಯಾಗಿ ಏಪ್ರಿಲ್ 06, 2009 ರಂದು ನೊಂದಾಯಿಸಲಾಗಿದೆ.

**ಸದಸ್ಯತ್ವ:** ಹೆಸರಾಂತ ವಿಜ್ಞಾನಿಗಳು ಮತ್ತು ಶಿಕ್ಷಣ ತಜ್ಞರು, ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಹಾಗೂ ವೈಜ್ಞಾನಿಕ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವಂತೆ ಅಕಾಡೆಮಿಯ ಸದಸ್ಯರನ್ನು ಕರ್ನಾಟಕ ಸರ್ಕಾರವು ನಾಮಕರಣ ಮಾಡುತ್ತದೆ.

**ಅಧ್ಯಕ್ಷರು:** ಪ್ರೊ. ಎಸ್ ಐಯಪ್ಪನ್, ನಿವೃತ್ತ ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂದಾನ ಪರಿಷತ್‌ನ (ICAR) ಹಾಗೂ ಭಾರತ ಸರ್ಕಾರದ ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗದ ನಿವೃತ್ತ ಕಾರ್ಯದರ್ಶಿಗಳು.

**ಸದಸ್ಯರು:** 13 (ಅಧ್ಯಕ್ಷರು ಸೇರಿ)

**ಸದಸ್ಯ ಕಾರ್ಯದರ್ಶಿಗಳು:** ಡಾ. ಪ್ರಕಾಶ್ ಎಂ. ಸೊಬರದ್, ನಿರ್ದೇಶಕರು (ತಾಂತ್ರಿಕ), ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ/ಎಂಡಿ, ಕೆಸ್ಟೆಪ್ಸ್/ಸದಸ್ಯ ಕಾರ್ಯದರ್ಶಿಗಳು, ಕವಿತಂಅ

**ದೂರದೃಷ್ಟಿ:** 'ಸರ್ವರ ಬದುಕಿಗಾಗಿ ಜ್ಞಾನ-ವಿಜ್ಞಾನ-ತಂತ್ರಜ್ಞಾನದ ಬೆಳಕು'

**ಧ್ಯೇಯ:** 'ಸಮಾಜದ ಕಲ್ಯಾಣಕ್ಕಾಗಿ ವಿಜ್ಞಾನ ಪ್ರೋತ್ಸಾಹ, ತಂತ್ರಜ್ಞಾನ ಪ್ರಸರಣ ಮತ್ತು ಆವಿಷ್ಕಾರಗಳನ್ನು ಪೋಷಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು'

**ಕಾರ್ಯಕ್ರಮಗಳ ಬಗ್ಗೆ ಮಾಹಿತಿ:**

1. **ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ**

   **ಫಲಾನುಭವಿಗಳು**: ವಿಜ್ಞಾನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು (ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ/ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ

   **ವ್ಯಾಪ್ತಿ:** ಕರ್ನಾಟಕ ರಾಜ್ಯ

   **ಕಾರ್ಯಕ್ರಮ**: ಅಕಾಡೆಮಿಯು ಆಯಾಯ ವಿಶ್ವವಿದ್ಯಾನಿಲಯದ ವಿಭಾಗಗಳ ಸಹಯೋಗದಲ್ಲಿ ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಭೌತ ವಿಜ್ಞಾನ, ತೋಟಗಾರಿಕೆ ಅಥವಾ ಕೃಷಿ ವಿಜ್ಞಾನ ಮತ್ತು ಆಹಾರ ವಿಜ್ಞಾನ ವಿಷಯಗಳಲ್ಲಿ ಉಪನ್ಯಾಸ ಮಾಲೆ ನಡೆಸುವುದು

2. **ವಾರ್ಷಿಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಧಾನ ಸಮ್ಮೇಳನಗಳು**

   **ಫಲಾನುಭವಿಗಳು**: ವಿಜ್ಞಾನ ಬೋಧಕ ವರ್ಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು, ಜನಸಾಮಾನ್ಯರು ಮತ್ತು ಆಸಕ್ತರು

   **ಫಲಾನುಭವಿಗಳ ಸಂಖ್ಯೆ** : ೩೦೦೦

   **ವ್ಯಾಪ್ತಿ:** ಕರ್ನಾಟಕ ರಾಜ್ಯ

3. **ಜೀವಮಾನ ಸಾಧನೆ ಪ್ರಶಸ್ತಿ**

   **ಫಲಾನುಭವಿಗಳು**: ವಿಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದ ಶ್ರೇಷ್ಠ ವಿಜ್ಞಾನಿಯೊಬ್ಬರನ್ನು ಆಯ್ಕೆ ಮಾಡಿ ಪ್ರಧಾನ ಸಮ್ಮೇಳನದದಿನ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

   **ಫಲಾನುಭವಿಗಳ ಸಂಖ್ಯೆ** : 1

   **ವ್ಯಾಪ್ತಿ:** ಕರ್ನಾಟಕ ರಾಜ್ಯ

4. **ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ**

   **ಫಲಾನುಭವಿಗಳು**: ವಿಜ್ಞಾನ ಬೋಧಕ ವರ್ಗ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ ವರ್ಗದವರು, ಜನಸಾಮಾನ್ಯರು ಮತ್ತು ಆಸಕ್ತರು

   **ಫಲಾನುಭವಿಗಳ ಸಂಖ್ಯೆ** : ೬೦೦

   **ವ್ಯಾಪ್ತಿ:** ಕರ್ನಾಟಕ ರಾಜ್ಯ

5. **ವಿಜಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಸರ್ಟಿಫಿಕೆಟ್ ಕೋರ್ಸ್**

**ಫಲಾನುಭವಿಗಳು**: ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಮತ್ತು ಇಂಜಿನಿಯರಿಂಗ್ ಉಪನ್ಯಾಸಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು

**ವ್ಯಾಪ್ತಿ**: ಕರ್ನಾಟಕ ರಾಜ್ಯ

**ಆಯ್ಕೆ ಪ್ರಕ್ರಿಯೆ**: ದಿನ ಪತ್ರಿಕೆಯಲ್ಲಿ ಮತ್ತು ವೆಬ್ ಸೈಟ್‌ನಲ್ಲಿ ಪ್ರಕಟಣೆ ನೀಡಲಾಗುವುದು. ಮೊದಲು ನೊಂದಾಯಿಸಿದವರಿಗೆ ಮೊದಲ ಆದ್ಯತೆ

6. **ವಿಜ್ಞಾನ ಲೋಕ ದ್ವೈಮಾಸಿಕ ಸಂಚಿಕೆ**

**ಫಲಾನುಭವಿಗಳು**: ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಮತ್ತು ಜನಸಾಮಾನ್ಯರು

**ವೇಳಾ ಪಟ್ಟಿ**: ಪ್ರತಿ ವರ್ಷ ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟೆಂಬರ್ ಮತ್ತು ನವೆಂಬರ್ ಮಾಹೆಯಲ್ಲಿ ಪ್ರಕಟ

**ವ್ಯಾಪ್ತಿ**: ಕರ್ನಾಟಕ ರಾಜ್ಯ

7. **ವಿಜ್ಞಾನ ಮೇಳ**

**ಫಲಾನುಭವಿಗಳು**: ಪದವಿ ವಿದ್ಯಾರ್ಥಿಗಳು ಹಾಗೂ ಆಸಕ್ತರು

**ಫಲಾನುಭವಿಗಳ ಸಂಖ್ಯೆ**: ೩೦೦

**ವ್ಯಾಪ್ತಿ**: ಕರ್ನಾಟಕ ರಾಜ್ಯ

8. **ಶ್ರೇಷ್ಠ ಲೇಖಕ ಪ್ರಶಸ್ತಿ – ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಹಾಗೂ ಕೃಷಿ ವಿಷಯದ ಕನ್ನಡ ಪುಸ್ತಕಗಳು**

**ಫಲಾನುಭವಿಗಳು**: ಕೃಷಿ, ವಿಜ್ಞಾನ, ವೈದ್ಯಕೀಯ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಕನ್ನಡದಲ್ಲಿ ಪುಸ್ತಕ ಬರೆದು ಪ್ರಕಟಿಸಿರುವ ಲೇಖಕರು

**ವ್ಯಾಪ್ತಿ**: ಕರ್ನಾಟಕ ರಾಜ್ಯ

**ಪ್ರಶಸ್ತಿ**: ಕೃಷಿ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳಲ್ಲಿ ಸಲ್ಲಿಕೆಯಾದ ಒಟ್ಟು ಪುಸ್ತಕಗಳ ಸಂಖ್ಯೆಗನುಗುಣವಾಗಿ ಗರಿಷ್ಠ 2 ಪ್ರಶಸ್ತಿಗಳನ್ನು ಪ್ರತಿ ವಿಷಯದಲ್ಲಿ ನೀಡಲಾಗುವುದು)

**ಆಯ್ಕೆ ಪ್ರಕ್ರಿಯೆ**:

- ಪ್ರಶಸ್ತಿಯನ್ನು ಎರಡು ವರ್ಷಗಳಿಗೊಮ್ಮೆ ನೀಡಲಾಗುವುದು

- ಪತ್ರಿಕೆಯಲ್ಲಿ ಪ್ರಕಟಣೆ – ಪ್ರತಿ ವರ್ಷ ಆಗಸ್ಟ್ ಮಾಹೆ
- ಬಾಹ್ಯ ಪರಿಣಿತರಿಂದ ಮೌಲ್ಯಮಾಪನ ಮತ್ತು ಅಕಾಡೆಮಿಯ ತಜ್ಞ ಸಮಿತಿಯಿಂದ ಅನುಮೋದನೆ
- ಫೆಬ್ರವರಿ/ಮಾರ್ಚ್ ಮಾಹೆಯಲ್ಲಿ ಪ್ರಶಸ್ತಿ ಪ್ರಧಾನ
- ವಿವರಗಳಿಗೆ ಅಕಾಡೆಮಿಯ ಅಂತರ್ಜಾಲ ತಾಣ ವೀಕ್ಷಿಸಿ

**೯. ರಾಷ್ಟ್ರೀಯ ವಿಜ್ಞಾನ ದಿನ ಹಾಗೂ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಹತ್ವದ ದಿನಗಳ ಆಚರಣೆ**

**ಫಲಾನುಭವಿಗಳು**: ವಿಜ್ಞಾನ ಪದವಿ ವಿದ್ಯಾರ್ಥಿಗಳು ಮತ್ತು ಬೋಧಕ ವರ್ಗ ಮತ್ತು ಜನಸಾಮಾನ್ಯರು

**ಫಲಾನುಭವಿಗಳ ಸಂಖ್ಯೆ**: ೩೦೦ – ೪೦೦

**ವ್ಯಾಪ್ತಿ**: ಕರ್ನಾಟಕ ರಾಜ್ಯ

**ಆಯ್ಕೆ:** ಆಸಕ್ತ ವಿಜ್ಞಾನ ಪದವಿ ಕಾಲೇಜುಗಳು ಕಾರ್ಯಕ್ರಮ ನಡೆಸುವುದಾಗಿ ಇಚ್ಛೆ ವ್ಯಕ್ತಪಡಿಸಿ ಅಕಾಡೆಮಿಗೆ ಪ್ರಸ್ತಾವನೆ ಕಳುಹಿಸಬಹುದು ಅಥವಾ ಅಕಾಡೆಮಿಯು ಅರ್ಹ ಕಾಲೇಜುಗಳನ್ನು ಸಂಪರ್ಕಿಸಿ ಕಾರ್ಯಕ್ರಮ ನಡೆಸಲು ಕೋರಬಹುದು

**ಸಂಪರ್ಕ ವಿಳಾಸ:**

**ಡಾ. ಎ. ಎಂ. ರಮೇಶ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ, ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ ಬಡಾವಣೆ, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು–೫೬೦೦೯೭
ದೂ/ಫ್ಯಾಕ್ಸ್ : ೦೮೦–೨೯೭೨೧೫೫೦
email: ksta.gok@gmail.com website: www.kstacademy.in